**30301 / 40301**

**ಮೂರನೆಯ ಚತುರ್ಮಾಸ ಬಿ.ಕಾಂ / ಬಿ.ಬಿ.ಎ ಪರೀಕ್ಷೆ – ಮಾರ್ಚ್/ಏಪ್ರಿಲ್ – 2022**

**ಸ್ಕೀಮ್: ಸಿಬಿಸಿಎಸ್**

164

**ಕನ್ನಡ ಭಾಷೆ**

**ವಾಣಿಜ್ಯ ಸೌರಭ – 3**

**ಸಮಯ: 3 ಗಂಟೆ** **ಗರಿಷ್ಠ ಅಂಕ: 80**

ಕಾವ್ಯ ಭಾಗ (50 ಅಂಕಗಳು)

**1. ಅ. ಒಂದು ಪದ್ಯ ಭಾಗವನ್ನು ಸಂದರ್ಭ ಸಹಿತ ವಿವರಿಸಿ:** **1x5=5**

೧. ಕೂಸು ಇದ್ದಾ ಮನಿಗೆ ಬೀಸಣಿಗೆ ಯಾತಕ
ಕೂಸು ಕಂದಯ್ಯ ಒಳ ಹೊರಗ । ಆಡಿದರ
ಬೀಸಣಿಗೆ ಗಾಳಿ ಸುಳಿದಾವ

೨. ನಿನ್ನೊಡವೆಯ ನಾನು ಕೊಂಡದಿಲ್ಲಣ್ಣ ನೀ
ನೆನ್ನೊಡವೆಯ ಕೊಂಡುದಿಲ್ಲ
ಮುನ್ನಯ್ಯನಿರಿಸಿದಂದದಿ ರಾಜ ಯುವರಾಜ
ಸನ್ನಾಹದೊಳಗಿರ್ದೆವಲ್ತೆ

**ಆ. ಒಂದು ವಾಕ್ಯದಲ್ಲಿ ಉತ್ತರಿಸಿ:** **5x1 =5**

೧. ಜ್ಯೋತಿಯನ್ನು ಯಾರಿಗೆ ಹೋಲಿಸಲಾಗಿದೆ?

೨. ಜೇಡರ ದಾಸಿಮಯ್ಯನ ಅಂಕಿತ ಯಾವುದು?

೩. ಪೌದನಪುರದ ರಾಜ ಯಾರು?

೪. ಜೈಮಿನಿ ಭಾರತವು ಯಾವ ಷಟ್ಪದಿಯಲ್ಲಿದೆ?

೫. ನಡೆಯಲ್ಲದ ನುಡಿ ಯಾವುದಕ್ಕೆ ಹಾನಿಯಾಗಿದೆ?

**2. ನಾಲ್ಕು ವಾಕ್ಯಗಳನ್ನು ಸಂದರ್ಭ ಸಹಿತ ವಿವರಿಸಿ:** **4x2½=10**

೧. ಅಡಿಗೆಯ ಮನೆಯಾಗ ಮಡದಿಯ ಸುಳಿವಿಲ್ಲ

೨. ಅಯ್ಯಾ ಈಸಕ್ಕಿಯಾಸೆ ನಿಮಗೇಕೆ

೩. ಪುರದ ಪುಣ್ಯಂ ಪುರುಷರೂಪಿಂದೆ ಪೋಗುತಿದೆ

೪. ಬದುಕಿದೆನೆಂದು ನಿಟ್ಟೋಟದಲಿ ಹಾಯ್ದನು ಬಿಟ್ಟಮಂಡೆಯಲಿ

೫. ಹರಿಯನುಳಿದಾವು ಬದುಕುವರಲ್ಲ ಚಿತ್ತದೊಳ್

೬. ಕಾಳಗವುಂಟು ಖಡ್ಗದ ಯುದ್ಧ ಬೇಡ

**3. ಅ. ಎರಡು ವಿಷಯಗಳಿಗೆ ಸ್ವಂತ ಅಭಿಪ್ರಾಯವನ್ನು ಬರೆಯಿರಿ:** **2x4=8**

೧. ತಾಯಿ ಎದೆ ಹಾಲಿನ ಮಹತ್ವವನ್ನು ಕುರಿತು ಬರೆಯಿರಿ.

೨. ಗಂಡ – ಹೆಂಡತಿಯ ಸಂಬಂಧದ ವಿಶೇಷತೆಗಳನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

೩. ಉತ್ತರಕುಮಾರನ ಹಾಸ್ಯ ಪ್ರಸಂಗವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

೪. ಸತ್ಯದ ಮಹತ್ವ ಕುರಿತು ನಿಮ್ಮ ಅಭಿಪ್ರಾಯವನ್ನು ತಿಳಿಸಿ.

ಪು.ತಿ.ನೋ

MFGC LIBRARY

ಆ. ನಾಲ್ಕು ಪದಗಳಿಗೆ ಅರ್ಥ ಬರೆಯಿರಿ: 4x½=2

ಚಿತ್ತ, ಕಳವೆ, ಪನ್ನಗ, ಎರಳೆ, ಅವನಿ, ಜೀಯ, ತುರಗ, ಭೂಪ

4. ಒಂದು ಪ್ರಶ್ನೆಗೆ ಉತ್ತರಿಸಿ: 1x10=10

೧. ಹರಿಶ್ಚಂದ್ರನ ರಾಜ್ಯ ಪರಿತ್ಯಾಗದ ಸಂದರ್ಭದ ಮಹತ್ವವನ್ನು ಕುರಿತು ಬರೆಯಿರಿ.

೨. ಉತ್ತರಕುಮಾರನ ಪೌರುಷ ರಣರಂಗದಲ್ಲಿ ನಗೆಗೆ ಕಾರಣವಾದ ಬಗೆ ಹೇಗೆ? ವಿವರಿಸಿ.

5. ಎರಡು ಪ್ರಶ್ನೆಗಳಿಗೆ ಉತ್ತರಿಸಿ: 2x5=10

೧. 'ಅವನಿಯೊಳ್ ಕಲ್ಲಾದಳ್' ಕಾವ್ಯದ ಚಂಡಿಯ ಪಾತ್ರವನು ಕುರಿತು ಬರೆಯಿರಿ.

೨. ಬಾಹುಬಲಿಯ ಮನಃ ಪರಿವರ್ತನೆಯಾದ ಸಂದರ್ಭವನ್ನು ಕುರಿತು ಬರೆಯಿರಿ.

೩. ತ್ರಿಪದಿಗಳಲ್ಲಿ ವ್ಯಕ್ತಗೊಂಡ ತವರಿನ ಮಹತ್ವವನ್ನು ತಿಳಿಸಿ.

೪. ಆಸೆಯನ್ನು ಕುರಿತ ಆಯ್ದಕ್ಕಿ ಲಕ್ಕಮ್ಮನ ನಿಲುವುಗಳನ್ನು ಪರಿಚಯಿಸಿ.

## ಗದ್ಯ ವೈವಿಧ್ಯ (30 ಅಂಕಗಳು)

6. ಒಂದು ಪ್ರಶ್ನೆಗೆ ಉತ್ತರಿಸಿ: 1x10=10

೧. 'ಬಾಳ್ವೆ ಸ್ವೀಕಾರಕ್ಕಿದೆ ನಿರಾಕರಣೆಗಲ್ಲ' ಎಂಬ ಆಶಯವನ್ನು ಪ್ರಬಂಧದ ಹಿನ್ನೆಲೆಯಲ್ಲಿ ವಿವರಿಸಿ.

೨. ಮಧ್ಯಮ ವರ್ಗದ ಜೀವನ ಕ್ರಮಗಳು 'ಸೊಸೆಯರ ಸಂಸಾರ' ಪ್ರಬಂಧದಲ್ಲಿ ಹೇಗೆ ನಿರೂಪಿತವಾಗಿದೆ. ವಿವರಿಸಿ.

7. ಒಂದು ಪ್ರಶ್ನೆಗೆ ಉತ್ತರಿಸಿ: 1x10=10

೧. ಹಣ ಸಂಪಾದನೆಯೇ ಜೀವನದ ಪರಮ ಗುರಿಯಲ್ಲ ಎಂಬ ಸಂದೇಶ 'ಕುಣಿಯುವ ಕುರುಡು ಕಾಂಚಾಣ' ಪ್ರಬಂಧದಲ್ಲಿ ಹೇಗೆ ಅಭಿವ್ಯಕ್ತಗೊಂಡಿದೆ? ವಿವರಿಸಿ.

೨. ಅಭಿವೃದ್ಧಿಯ ಹೆಸರಿನಲ್ಲಿ ಮನುಷ್ಯನ ಅಸ್ತಿತ್ವವೇ ನಾಶವಾಗುವ ಚಿತ್ರಣ 'ಲೂಟಿಯ ಹೆದ್ದಾರಿಗಳು' ಪ್ರಬಂಧದಲ್ಲಿ ಹೇಗೆ ಚಿತ್ರಿತವಾಗಿದೆ? ವಿವರಿಸಿ.

8. ಎರಡು ಪ್ರಶ್ನೆಗಳನ್ನು ಕುರಿತು ಸಂಕ್ಷಿಪ್ತವಾಗಿ ಉತ್ತರಿಸಿ: 2x5=10

೧. ಅತ್ತೆ – ಸೊಸೆಯರ ಸಂಬಂಧ ಸ್ವಾರಸ್ಯವನ್ನು ಚಿತ್ರಿಸಿ.

೨. 'ಬದುಕು ಸಿಹಿ – ಕಹಿಗಳ ಮಿಶ್ರಣ' ಹೇಗೆ ಎಂಬುದನ್ನು 'ಬಾಳ್ವೆ ಸ್ವೀಕಾರಕ್ಕಿದೆ ನಿರಾಕರಣೆಗಲ್ಲ' ಎಂಬ ಪ್ರಬಂಧದ ಹಿನ್ನೆಲೆಯಲ್ಲಿ ಬರೆಯಿರಿ.

೩. ಹುಲಿಯೂರಿನ ಸರಹದ್ದು ಕಥೆಯಲ್ಲಿ ಸೋಮುವಿನ ಪಾತ್ರ ಚಿತ್ರಣವನ್ನು ಕುರಿತು ಬರೆಯಿರಿ.

೪. ಪರಿಸರದ ಮೇಲೆ ಮಾನವನ ನಿಲ್ಲದ ಕ್ರೌರ್ಯ 'ಲೂಟಿಯ ಹೆದ್ದಾರಿಗಳು' ಪ್ರಬಂಧದಲ್ಲಿ ಹೇಗೆ ವ್ಯಕ್ತವಾಗಿದೆ? ವಿವರಿಸಿ.

** *** **

MFCG LIBRARY